ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

**2017–18ನೇ ಸಾಲಿನ ಎಂ.ಫಿಲ್. ಪ್ರವೇಶ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಸೂಚನೆ**

**ಸೂಚನೆ :**

1. ಪರೀಕ್ಷೆ ವೇಳಾಪಟ್ಟಿ : ಬೆಳಿಗ್ಗೆ 11–00 ರಿಂದ 1–30ರ ವರೆಗೆ ಲಿಖಿತ ಪರೀಕ್ಷೆ ನಡೆಯುತ್ತವೆ ಮಧ್ಯಾಹ್ನ 2–30 ರಿಂದ ಮೌಖಿಕ ಪರೀಕ್ಷೆ ಆಯಾ ವಿಭಾಗಗಳಲ್ಲಿ ನಡೆಯುತ್ತವೆ. ವಿದ್ಯಾರ್ಥಿಗಳು ಅರ್ಧ ಗಂಟೆ ಮೊದಲೇ ಪರೀಕ್ಷೆ ಕೊಠಡಿಯಲ್ಲಿ ಹಾಜರಾಗುವುದು.

2. ದಿನಾಂಕ: 4.10.2017ರಂದು ವಿದ್ಯಾರಣ್ಯ ಮತ್ತು ಮಾನ್ಯತಾ ಕೇಂದ್ರದ ವಿಭಾಗಗಳ ಎಂ.ಫಿಲ್. ಪ್ರವೇಶ ಪರೀಕ್ಷೆಗಳು 'ನುಡಿ' ಹೊಸ ಕಟ್ಟಡದಲ್ಲಿ ನಡೆಯುತ್ತವೆ.

3. ಎಂ.ಫಿಲ್. ಪ್ರವೇಶ ಪರೀಕ್ಷೆಯ ಲಿಖಿತ ಪರೀಕ್ಷೆಯನ್ನು 80 ಅಂಕಗಳಿಗೆ ಮತ್ತು ಮೌಖಿಕ ಪರೀಕ್ಷೆಯನ್ನು 20 ಅಂಕಗಳಿಗೆ ನಡೆಸಲಾಗುವುದು.

4. ಪ್ರವೇಶ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಊಟ, ವಸತಿ ಸೌಕರ್ಯಗಳನ್ನು ಅಭ್ಯರ್ಥಿಗಳೇ ನೋಡಿಕೊಳ್ಳುವುದು.

5. ಮೌಖಿಕ ಪರೀಕ್ಷೆಯು ಲಿಖಿತ ಪರೀಕ್ಷೆಯ ದಿನದಂದೇ ಸಂಬಂಧಿಸಿದ ಅಧ್ಯಯನ ವಿಭಾಗಗಳಲ್ಲಿ ಮಧ್ಯಾಹ್ನ 2.30 ಗಂಟೆಯಿಂದ ನಡೆಯುತ್ತದೆ. ಅಭ್ಯರ್ಥಿಗಳು ಮೌಖಿಕ ಪರೀಕ್ಷೆಗೆ ಹಾಜರಾಗುವಾಗ ತಮ್ಮ ವಿದ್ಯಾರ್ಹತೆಗಳನ್ನು ಸಮರ್ಥಿಸುವ ಪದವಿ ಮತ್ತು ಸ್ನಾತಕೋತ್ತರ ಪದವಿಯ ಅಗತ್ಯ ಮೂಲ ದಾಖಲೆಗಳನ್ನು ಒದಗಿಸುವುದು.

6. 2017–18ನೇ ಸಾಲಿನ ಎಂ.ಫಿಲ್. ಅಧ್ಯಯನಗಳ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ. ನೇರವಾಗಿ ಅರ್ಹತಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಲು ಸೂಚಿಸಿದೆ.

7. ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.orgನ ಮೂಲಕ ದಿನಾಂಕ: 13–10–2017ರಂದು ಪ್ರಕಟಿಸಲಾಗುವುದು. ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.

**ವಿಶೇಷ ಸೂಚನೆ:**

1. ***** ಈ ಗುರುತು ಮಾಡಿರುವ ಅಭ್ಯರ್ಥಿಗಳು (ಯುಜಿಸಿ/ಸಿಎಸ್‌ಐಆರ್/ಎನ್‌ಇಟಿ/ಎಸ್‌ಎಲ್‌ಇಟಿ/ ಜಿಎಟಿಇ/ಜೆಆರ್‌ಎಫ್ ಅಥವಾ ಎಫ್‌ಐಪಿ/ಕ್ಯೂಐಪಿ ಕಾರ್ಯಕ್ರಮಗಳಲ್ಲಿ ತೇರ್ಗಡೆ ಹೊಂದಿದ) ಲಿಖಿತ ಪರೀಕ್ಷೆಯಿಂದ ವಿನಾಯಿತಿ ಬಯಸಿದ ವಿದ್ಯಾರ್ಥಿಗಳು ಮಧ್ಯಾಹ್ನ 2–30 ಕ್ಕೆ ಆಯಾ ವಿಭಾಗಗಳಲ್ಲಿ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು.

ನಿರ್ದೇಶಕರು, ಅಧ್ಯಯನಾಂಗ